ಸಿ.ಸಿಃ 1353/2024

ಚಾ.ಸಾಃ 06

ಪ್ರಾ.ಸಾಃ 05

# ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬಸವನ-ಬಾಗೇವಾಡಿ

**ಸಾಕ್ಷಿಗೆ ದಿನಾಂಕ 10.12.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

ಹೆಸರು ಃ ನಿಂಗಪ್ಪ ಹೊಟಗೂರ

ತಂದೆಯ ಹೆಸರು ಃ ಚಂದಪ್ಪ

ವಯಸ್ಸು ಃ 58 ವರ್ಷ

ಉದ್ಯೋಗ ಃ ಪೂಜಾರಿ

ವಾಸಸ್ಥಳ ಃ ಟಕ್ಕಳಕಿ

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದಃ**

ಮೃತ ಕರಿಯಪ್ಪರವರ ಪರಿಚಯ ಇರುತ್ತದೆ. ಒಂದು ವರ್ಷದ ಹಿಂದೆ ನಾನು ಮತ್ತು ಮೃತ ಕರಿಯಪ್ಪ ಬ.ಬಾಗೇವಾಡಿಗೆ ಬಂದು ಮರಳಿ ಟಕ್ಕಳಿಕೆಗೆ ಮೋಟರ ಸೈಕಲ ಮೇಲೆ ಹೋಗುತ್ತಿರುವಾಗ, ನಾನು ಮೋಟರ ಸೈಕಲ ಚಲಾವನೆ ಮಾಡುತ್ತಿದ್ದು, ಕರಿಯಪ್ಪ ಹಿಂದೆ ಕುಳಿತಿದ್ದನು. ನಾವು ಹೋಗುತ್ತಿರುವಾಗ ಹಿಂದಿನಿಂದ ಒಂದು ಕಾರು ಬಂದು ಡಿಕ್ಕಿಪಡಿಸಿದ ಕಾರಣ ನಾವು ಕೇಳಗೆ ಬಿದಿದ್ದು, ಸದರಿ ಕಾರು ಕರಿಯಪ್ಪನ ಮೇಲೆ ಹಾದು ಹೋಗಿರುತ್ತದೆ ಮತ್ತು ಕಾರ ಚಾಲಕನು ವಾಹನ ನಿಲ್ಲಿಸದೆ ಹಾಗೆ ಹೋಗಿರುತ್ತಾನೆ. ನಂತರ ಸ್ಥಳದಲ್ಲಿ ಜನ ಬಂದಿರುತ್ತಾರೆ, ನಂತರ ಪೊಲೀಸರು ಸ್ಥಳಕ್ಕೆ ಬಂದಿರುತ್ತಾರೆ. ನನಗೆ ಸ್ವಲ್ಪ ಪೆಟ್ಟಾಗಿರುತ್ತದೆ, ಕರಿಯಪ್ಪರವರು ಸ್ಥಳದಲ್ಲಿ ಮೃತಪಟ್ಟಿರುತ್ತಾರೆ. ನಮ್ಮ ಮೋಟರ ಸೈಲಕ ನಂ.ಕೆಎ-40/ಎಲ್-5434 ಆಗಿರುತ್ತದೆ.

2. ಕಾರ ಚಾಲಕನ ಹೆಸರು ಆಸ್ಪಾಕ ಹುಸೇನ ಎಂದು ಗೊತ್ತಾಗಿರುತ್ತದೆ. 4 ದಿನಗಳ ನಂತರ ಪೊಲೀಸರು ಠಾಣೆಗೆ ಕರೆಯಿಸಿ ಒಬ್ಬ ವ್ಯಕ್ತಿಯನ್ನು ತೋರಿಸಿ ಅಪಘಾತಪಡಿಸಿದ

ಕಾರ ಚಾಲಕ ಇವರೆ ಎಂದು ಪೊಲೀಸುರ ತೋರಿಸಿರುತ್ತಾರೆ. ಕಾರ ನಂ.**7298** ಆಗಿರುತ್ತದೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎನ್.ಎಸ್.ಬಿ. ವಕೀಲರಿಂದಃ-</u>**

**3.** ನಾನು 1 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾವು ಮೋಟರ ಸೈಕಲ ಮೇಲೆ 3 ಜನ ಹೊರಟಿದ್ದೇವು ಎಂದರೆ ಸರಿಯಲ್ಲ. ಅಪಘಾತದ ಸ್ಥಳ ಮೂರಾರ್ಜಿ ದೇಸಾಯಿ ಶಾಲೆಯ ಮುಂದೆ ಇರುತ್ತದೆ. ಸದರಿ ಸ್ಥಳದಲ್ಲಿ ರೋಡ ಬ್ರೇಕ್ ಇರುತ್ತವೆ ಎಂದರೆ ಸರಿ. ನಾನು ಮೋಟರ ಸೈಕಲನ್ನು ಜೋರಾಗಿ ನಡೆಸಿಕೊಂಡು ಹೋಗುತ್ತಿರುವ ಸಮಯದಲ್ಲಿ ರೋಡ ಬ್ರೇಕಿನಲ್ಲಿ ಜಿಗಿಸಿದ ಕಾರಣ ಕರಿಯಪ್ಪರವರ ಕೇಳಗೆ ಬಿದ್ದು ತಲೆಗೆ ಪೆಟ್ಟಾಗಿ ಮೃತಪಟ್ಟಿರುತ್ತಾನೆ ಎಂದರೆ ಸರಿಯಲ್ಲ. ಅಪಘಾತವು ನನ್ನ ನಿರ್ಲಕ್ಷ್ಯತನದಿಂದ ಆಗಿರುತ್ತದೆ ಎಂದರೆ ಸರಿಯಲ್ಲ.

**4.** ನನಗೆ ಚಾಲನಾ ಪರವಾಣಿಗೆ ಮತ್ತು ವಾಹನಕ್ಕೆ ವಿಮೆ ಇರುತ್ತದೆ. ಚಾಲನಾ ಪರವಾಣಿಗೆ ಮತ್ತು ವಿಮೆಯ ಪ್ರತಿಯನ್ನು ಪೊಲೀಸರಿಗೆ ನೀಡಿರುತ್ತೇನೆ. ಮೃತ ಕರಿಯಪ್ಪ ನನಗೆ ಮಾವನಾಗಬೇಕು. ನಾನು ವಾಹನವನ್ನು ಅತೀ ವೇಗವಾಗಿ ಚಲಾಯಿಸಿಕೊಂಡು ಬಂದು ಬಿದಿದ್ದರಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಕಾರ ಚಾಲಕ ಡಿಕ್ಕಿಪಡಿಸಿರುತ್ತಾನೆ ಎಂದು ನಾನೆ ನೋಡಿರುತ್ತೇನೆ. ಮೂರಾರ್ಜಿ ದೇಸಾಯಿ ಸ್ಕೂಲ ಹತ್ತಿರ ಬಲದಿಕ್ಕಿಗೆ ತೀರುಗುವಾಗ ಡಿಕ್ಕಿಪಡಿಸಿರುತ್ತಾನೆ. ಆರೋಪಿಯು ಯಾವುದೇ ಡಿಕ್ಕಿಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮೃತ ಕರಿಯಪ್ಪನಿಗೆ ಪರಿಹಾರ ಕೊಡಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಮರು ಹೇಳಿಕೆ

ನೀಡಿಲ್ಲ ಎಂದರೆ ಸರಿಯಲ್ಲ. ನನಗೆ ಚಾಲನ ಪರವಾಣಿಗೆ ಮತ್ತು ವಿಮೆ ಇಲ್ಲದ ಕಾರಣ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ 5-00 ಗಂಟೆ ಸಮಯದಲ್ಲಿ ಆಗಿರುತ್ತದೆ. ಆರೋಪಿಯಿಂದ ಪರಿಹಾರ ಪಡೆದುಕೊಳ್ಳುವ ಉದ್ದೇಶದಿಂದ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ. ಅಮೀತ್ ಘಟ್ಟಿ )**
**ದಿವಾಣಿ ನ್ಯಾಯಾಧೀಶರು ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**